## ಮೂರನೇ ಸ್ಪರ್ಧಿಗೂ ಅವಕಾಶ ಕೊಡಿ

ಚಂದನ ವಾಹಿನಿಯಲ್ಲಿ 'ಥಟ್ ಅಂತ ಹೇಳಿ' ಕಾರ್ಯಕ್ರಮ ಸೊಗಸಾಗಿ ಮೂಡಿ ಬರುತ್ತಿರುವುದು ಸಂತಸದ ಸಂಗತಿ. ಈ ಕಾರ್ಯಕ್ರಮದಲ್ಲಿ ಮೂವರು ಸ್ಪರ್ಧಿಗಳಿದ್ದು, ಮೊದಲು ಉತ್ತರ ಹೇಳಿದ ಇಬ್ಬರನ್ನು ಮಾತ್ರ ಪರಿಗಣಿಸಲಾಗುತ್ತಿದೆ. ಮೂರನೆಯವರು ಸರಿ ಉತ್ತರ ನೀಡಿದರೂ ಅವರಿಗೆ ಪುಸ್ತಕ ಬಹುಮಾನವಿಲ್ಲ.

ಕೆಲವೊಮ್ಮೆ ಇಬ್ಬರು ಸ್ಪರ್ಧಿಗಳನ್ನು ಮಾತ್ರ ಪ್ರಶ್ನಿಸಲಾಗುತ್ತದೆ. ಕೆಲವರು ಉತ್ತರದ ಆಯ್ಕೆಗಳು ಬಂದ ಕೆಲವೇ ಸೆಕೆಂಡುಗಳಲ್ಲಿ ಯೋಚಿಸದೆ ಬಝರ್ ಒತ್ತುತ್ತಾರೆ. ಬಝರ್ ಒತ್ತಿದ ನಂತರ ಯೋಚಿಸುವುದೂ ಇರುತ್ತದೆ. ಬಝರ್ ಒತ್ತುವುದರಲ್ಲಿ ನಿಧಾನಿಸಿದ ಮೂರನೇಯವರಿಗೆ ಪುಸ್ತಕ ಬಹುಮಾನವಿಲ್ಲ.

ಆಯ್ಕೆಗಳಿರುವ ಪ್ರಶ್ನೆಗಳಿಗೆ ಬಹುಬೇಗ ಬಝರ್ ಒತ್ತುವ ಸ್ಪರ್ಧಿಗಳು ಬಿಟ್ಟ ಅಕ್ಷರ ತುಂಬಿ, ಅಕ್ಷರಗಳನ್ನು ಜೋಡಿಸಿ ಅರ್ಥ ಬರುವ ವಾಕ್ಯ ನೀಡುವಲ್ಲಿ, ಲೆಕ್ಕವನ್ನು ಮಾಡುವಲ್ಲಿ ನಿಧಾನಿಸುವುದನ್ನು ಕಾಣುತ್ತೇವೆ. ಆದ್ದರಿಂದ ಮೂರನೆಯ ಸ್ಪರ್ಧಿಗೂ ಅವಕಾಶವನ್ನು ನೀಡಿ, ಸರಿಯುತ್ತರ ನೀಡಿದಲ್ಲಿ ಪುಸ್ತಕ ಬಹುಮಾನವನ್ನು ನೀಡಿ, ತಪ್ಪು ಉತ್ತರಕ್ಕೆ ಪುಸ್ತಕ ಹಿಂಪಡೆಯುವುದು ಸೂಕ್ತವೆನಿಸುತ್ತದೆ.

—ಸು. ವಿಜಯಲಕ್ಷ್ಮಿ ಶಿವಮೊಗ್ಗ

## ಅಬ್ಬರದಿಂದ ದೂರ ಇರಲಿ

ಈಚೆಗೆ ರಾಜ್ಯೋತ್ಸವ ಸನ್ಮಾನಿತರನ್ನು ಗೌರವಿಸುವ ಕಾರ್ಯಕ್ರಮ ರಾತ್ರಿ ದೂರದರ್ಶನದಲ್ಲಿ ಪ್ರಸಾರವಾಯಿತು. ಇಡೀ ಕಾರ್ಯಕ್ರಮ ಸಮಚಿತ್ತವಾಗಿತ್ತು. ನಿರೂಪಣೆ ನೋಡಿದ ತಕ್ಷಣ ಇದ್ಯಾವ ಖಾಸಗಿ ಚಾನೆಲ್‌ನ ಕಾರ್ಯಕ್ರಮ ಅಂತ ಅನುಮಾನ ಬಂದಿತು. ಇದುವರೆಗೂ ಆ ರೀತಿಯ ಧ್ವನಿ ಅಬ್ಬರ ದೂರದರ್ಶನದಲ್ಲಿ ಇರಲಿಲ್ಲ. ಯಾವುದೇ ಕಾರ್ಯಕ್ರಮವಾದರೂ ನಿರೂಪಣೆ ಹಿನ್ನೆಲೆಯಂತೆ ಇರಬೇಕು. ಇಲ್ಲದಿದ್ದರೆ ಅದರ ಅಬ್ಬರ ಹೆಚ್ಚಾಗು ಒಟ್ಟಾರೆ ಕಾರ್ಯಕ್ರಮದ ಸೊಬಗನ್ನು ಕಡಿಮೆ ಮಾಡುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಆತ್ಮಹತ್ಯೆ ಪರಿಹಾರವಲ್ಲ

ಕನ್ನಡ ಚಿತ್ರರಂಗದ ಖ್ಯಾತ ನಟ ಪುನೀತ್ ಅಗಲಿಕೆ ಅವರ ಅಭಿಮಾನಿಗಳಿಗೆ ತೀವ್ರ ದುಃಖದ ಸಂಗತಿ. ಇದು ಕನ್ನಡ ಚಿತ್ರರಂಗಕ್ಕೆ ತುಂಬಲಾರದ ನಷ್ಟ. ಅವರ ಅಭಿಮಾನದಿಂದ ಭಾವುಕರಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆ ಯೋಚಿಸದೆ ನಾಯಕ ನಟರ ಸಮಾಜ ಸೇವೆ, ಆದರ್ಶ ಗುಣಗಳನ್ನು ಬೆಳೆಸಿಕೊಂಡು ಹೋದರೆ ಅವರ ಆತ್ಮಕ್ಕೆ ನಿಜಕ್ಕೂ ಶಾಂತಿ ಸಿಗುತ್ತದೆ.

ತಮಿಳು ನಟ ವಿಶಾಲ್ ಅವರು ಪುನೀತ್ ಅವರು ನಿರ್ವಹಿಸುತ್ತಿದ್ದ 1800 ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಸ್ವತಃ ತಾವೇ ಹೊತ್ತುಕೊಂಡು ಹೋಗುವ ಭರವಸೆಯನ್ನು ಟೀವಿಯಲ್ಲಿ ನೋಡಿದೆ. ಈ ಕಾರ್ಯ ನಿಜಕ್ಕೂ ಶ್ಲಾಘನೀಯ.

—ದೀಪಶ್ರೀ ಎಸ್. ಕೂಡ್ಲಿಗಿ

ವಾರದ ಪತ್ರ

## ಅಪ್ಪು ಆದರ್ಶ ಮುನ್ನಡೆಸೋಣ

ಅಕ್ಟೋಬರ್ 29ರಂದು ಚಂದನವನದ ಪಾಲಿಗೆ ಕರಾಳ ದಿನವಾಯ್ತು. ಆ ದಿನ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರು ಹೃದಯಾಘಾತ ಆಗಿರುವ ವಿಷಯವನ್ನು ಟೀವಿ ವಾಹಿನಿಗಳಲ್ಲಿ ನೋಡುತ್ತಿದ್ದಂತೆ ಮನಸ್ಸಿಗೆ ಆಘಾತವಾಯ್ತು. ಪುನೀತ್ ಹುಷಾರಾಗಿ ಬರಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿದೆ. ನನ್ನಂತೆ ಕರ್ನಾಟಕದ ಜನರೆಲ್ಲಾ ಪ್ರಾರ್ಥಿಸಿರುತ್ತಾರೆ. ಅವರು ಉಳಿಯಲೇ ಇಲ್ಲ. ನಮ್ಮ ಕುಟುಂಬದವರನ್ನು ಕಳೆದುಕೊಂಡ ಹಾಗೇ ಬಹಳ ದುಃಖವಾಯಿತು. ಬಾಲನಟನಾಗಿ ಅಭಿನಯಿಸಿದ ಚಿತ್ರದಿಂದ ಹಿಡಿದು ನಾಯಕನಾಗಿ ಅಭಿನಯಿಸಿದ ಚಿತ್ರಗಳನ್ನು ನೋಡಿದ್ದ ನಮಗೆ ಇಂತಹ ಒಳ್ಳೆಯ ನಟ, ಗಾಯಕ ಎಲ್ಲಕ್ಕಿಂತ ಹೆಚ್ಚಾಗಿ ಸರಳ, ಸಜ್ಜನಿಕೆಯ ವಿನಯವಂತನನ್ನು ಆ ದೇವರು ಇಷ್ಟು ಬೇಗ ತನ್ನ ಬಳಿ ಕರೆಸಿಕೊಳ್ಳಬಾರದಿತ್ತು ಎನ್ನಿಸಿತು. ಅವರು ನಡೆಸಿಕೊಡುತ್ತಿದ್ದ ಕನ್ನಡದ 'ಕೋಟ್ಯಧಿಪತಿ', 'ಫ್ಯಾಮಿಲಿ ಪವರ್' ಕಾರ್ಯಕ್ರಮಗಳು ಜನಪ್ರಿಯವಾಗಿದ್ದವು. 'ಶರಣರ ಗುಣ ಮರಣದಲ್ಲಿ ನೋಡು' ಎಂಬ ಮಾತಿನಂತೆ ಅವರ ಅಂತಿಮ ದರ್ಶನ ಪಡೆಯಲು ಅಭಿಮಾನಿಗಳು ಸಾಗರದೋಪಾದಿಯಲ್ಲಿ ಬಂದದ್ದನ್ನು ನೋಡಿ ಅವರ ಜನಪ್ರಿಯತೆ, ಜನರ ಅಭಿಮಾನ ತಿಳಿಯಿತು.

—ಕೆ.ಎಸ್. ಸವಿತ, ಬೆಂಗಳೂರು

## ಒಂಬತ್ತರ ಸುದ್ದಿ ಸಮಗ್ರವಾಗಿರಲಿ

ಕನ್ನಡದ ಸುದ್ದಿವಾಹಿನಿಗಳಲ್ಲಿ ರಾತ್ರಿ ಒಂಬತ್ತಕ್ಕೆ ಪ್ರಸಾರವಾಗುವ ಸುದ್ದಿಯಲ್ಲಿ ಹೆಚ್ಚಿನ ಪಾಲು ಆ ದಿನದ ಒಂದೆರಡು ಘಟನೆಗಳ ಸುತ್ತ ಗಿರಕಿ ಹೊಡೆಯುತ್ತವೆ. ರಾತ್ರಿ ಒಂಬತ್ತು ಗಂಟೆಗೆ ಜನ ಬಹುತೇಕ ಮನೆಯಲ್ಲಿ ವಿರಾಮದಿಂದ ಕುಳಿತು ಆದಿನದ ವಿದ್ಯಾಮಾನದ ಬಗ್ಗೆ ಯೋಚಿಸುತ್ತಾರೆ. ಅಂದು ರಾಜ್ಯ, ದೇಶದ ಆಗುಹೋಗುಗಳನ್ನು ಸಂಕ್ಷಿಪ್ತವಾಗಿಯಾದರೂ ತಿಳಿಯಬಯಸುತ್ತಾರೆ.

ವೀಕ್ಷಕರ ಒತ್ತಾಸೆಗೆ ಸುದ್ದಿ ವಾಹಿನಿಗಳು ತಮ್ಮ ಸುದ್ದಿ ಪ್ರಸಾರದಲ್ಲಿ ಸ್ವಲ್ಪ ಬದಲಾವಣೆ ಮಾಡಿ ದೇಶದ ಸಮಗ್ರ ಸುದ್ದಿಯನ್ನು ಆ ಸಮಯದಲ್ಲಿ ನೀಡುವಂತೆ ಆದರೆ ಹೆಚ್ಚು ಅನುಕೂಲ.

—ರಮಾನಂದ ಶರ್ಮಾ, ನವದೆಹಲಿ

## ಕನ್ನಡತಿ ಆಗಿಯೇ ಉಳಿಯಲಿ

ಕಲರ್ಸ್ ಕನ್ನಡ 'ಕನ್ನಡತಿ' ಇತ್ತೀಚೆಗೆ ತನ್ನತನವನ್ನು ಕಡಿಮೆ ಮಾಡಿಕೊಳ್ಳುತ್ತಿದೆ ಅನಿಸುತ್ತಿದೆ. ಮೊದಲು ಚೊಕ್ಕ ಅಭಿನಯ ಹಿತಮಿತವಾದ ಸಂಭಾಷಣೆಗಳಿಂದ ಕೂಡಿದ್ದ ಈ ಧಾರಾವಾಹಿ ಇತ್ತೀಚೆಗೆ ಅತಿಯಾದ ಸಂಭಾಷಣೆ, ನಾಟಕೀಯ ಸನ್ನಿವೇಶಗಳಿಂದ ಕೂಡಿ ಏಕೋ ಪೇಲವ ಎನಿಸುತ್ತದೆ. ಮಿತವಾದ ಸಂಭಾಷಣೆ ಚೊಕ್ಕ ಅಭಿನಯದಿಂದ ಕೂಡಿದ್ದರೆ ಕನ್ನಡತಿ ಕನ್ನಡತಿಯಾಗಿಯೇ ಉಳಿಯುತ್ತದೆ.

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

## ಅಡ್ಡಿಯಾಗದಿರಲಿ



ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ಅನೇಕ ವರ್ಷಗಳಿಂದ ವೀಕ್ಷಿಸುತ್ತಿದ್ದೇವೆ. ಅಲ್ಲಿ ಕೇಳುವ ಪ್ರಶ್ನೆಗಳಿಗೆ ನಾನೂ ಉತ್ತರಿಸಲು ಪ್ರಯತ್ನಿಸುವೆ. ಹಾಗೇ ಲೆಕ್ಕ, ಪದಬಂಧ ಬಿಡಿಸಲು ಪೆನ್ನು, ಪುಸ್ತಕ ಸಿದ್ಧವಾಗಿ ಇಟ್ಟುಕೊಂಡೇ ಕುಳಿತಿರುತ್ತೇನೆ. ಆದರೆ ನವೆಂಬರ್ 2ರ ಕಾರ್ಯಕ್ರಮದಲ್ಲಿ ಕೊನೆಯ ಸಾಲಿನ ಲೆಕ್ಕ ಹಾಗೂ ಪದಬಂಧದ ಮೂರನೇ ಸುಳಿವು ರನ್ನಿಂಗ್ ಮೆಸೇಜ್ ಬರುತ್ತಿದ್ದ ಕಾರಣ ಕಾಣದೆ ಅಡಚಣೆ ಉಂಟಾಯಿತು. ದಯವಿಟ್ಟು ಇನ್ನು ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

—ಸವಿತಾ, ಬೆಂಗಳೂರು

## ಮನೋಜ್ಞ ಚಿತ್ರ

ಝೀ ಕನ್ನಡದ 'ಜೊತೆ ಜೊತೆಯಲಿ' ಧಾರಾವಾಹಿಯ ಇತ್ತೀಚಿನ ಸಂಚಿಕೆಯಲ್ಲಿ ಒಬ್ಬ ಶ್ರೀಮಂತ ಮನೆತನದ ಅಳಿಯ ಹೇಗೆ ಸಾಮಾನ್ಯ ಕುಟುಂಬದ ಹುಡುಗಿಯ ಮನೆಗೆ ಬಂದಾಗ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಹೊಂದಿಕೊಂಡು ಹೋಗಬೇಕು ಎನ್ನುವ ಸಂದರ್ಭ ಸೊಗಸಾಗಿ ಮೂಡಿಬಂತು. ಆ ಸಂದರ್ಭದಲ್ಲಿ ನೈಜತೆಯಿಂದ ಕೂಡಿದ ಸಂಭಾಷಣೆ ಮನೋಜ್ಞವಾಗಿ ಚಿತ್ರಿಸಿದ್ದಾರೆ ಎಂದು ಅನಿಸಿತು.

—ಎಂ.ಆರ್. ಚಂದ್ರಶೇಖರ್ ಬೆಂಗಳೂರು